ಜೀವನ ರಸಕ್ಕೆ ಪೋಷಕವಾಗಿದೆ. ಅವು ಬರಿ ನೀತಿ ಬೋಧಕವಾದವುಗಳಲ್ಲ. ಅನುಭವದ ಭೇದ, ವಿವೇಕದ ವಾಣಿ ಅವುಗಳಲ್ಲಿದೆ. ಕೆಲವು ಪದ್ಯಗಳಲ್ಲಿ ಇದು ಲೇಸು, ಅದು ಹೊಲ್ಲ ಎಂದು ಹೇಳುವಾಗ ಮಾತಿನ ಚತುರವಾದ ಜೋಡಣೆ ಕಾಣುತ್ತದೆ. ಸರ್ವಜ್ಞ ತ್ರಿಪದಿಗಳಲ್ಲಿ ಸಮಾಜದ ಗುಣ ದೋಷಗಳ ಚಿತ್ರಣವಿದೆ, ವಿಡಂಬನೆ ಇದೆ, ಬೋಧನೆ ಇದೆ, ಕಂಡಿದ್ದನ್ನು ಕಂಡೊಡನೆಯೇ ಪದ್ಯ ರೂಪದಲ್ಲಿ ಕಟ್ಟಿ ನಿಲ್ಲಿಸುವ ಕೌಶಲ್ಯವಿರುವ ತ್ರಿಕಾಲ ಜ್ಞಾನಿಯಾದವನು. ಸರ್ವಜ್ಞನದು ಮನಸ್ಸನ್ನು ರಂಜಿಸುವ ಅಥವಾ ಅರ್ಥ ರಮ್ಯತೆಯನ್ನು ವ್ಯಂಜಿಸುವ ಉಕ್ತಿ ವಿಧಾನವಲ್ಲ. ಮನಸ್ಸನ್ನು ಕೆದಕುವ ಹೊಡೆದೆಬ್ಬಿಸುವ ಉಕ್ತಿ ವಿಧಾನ ಪ್ರಶ್ನಿಸುವ ವಿಧಾನ.

**ಆಕರ ಗ್ರಂಥಗಳು:**


1) ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಎಲ್.ಎಸ್. ಕಾಡದೇವರ ಮಠ
2) ಕನ್ನಡ ಸಾಹಿತ್ಯ ಸಂಸ್ಕೃತಿಕೋಶ, ಡಾ. ಚಿ.ಸಿ.ನಿಂಗಣ್ಣ
3) ಕನ್ನಡ ಸಾಹಿತ್ಯ ಚರಿತ್ರೆ, ರಂ.ಶ್ರೀ ಮುಗಳಿ
4) ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ, ಡಾ. ಜಿ.ಎಸ್. ಶಿವರುದ್ದರಪ್ಪ.


# ಸರ್ವಜ್ಞನ ತ್ರಿಪದಿಗಳಲ್ಲಿ ಕೌಟುಂಬಿಕ ನೆಲೆಯಲ್ಲಿ ಸ್ತ್ರೀ ಪರಿಕಲ್ಪನೆ

– ನಿರೂಷ ಎಂ.ಆರ್.

ಹಾವೇರಿ ಜಿಲ್ಲೆಯ ಅಂಬಲೂರಿನಲ್ಲಿ ಜನಿಸಿದ ಸರ್ವಜ್ಞ, ಅತಿ ಕಿರಿಯ ವಯಸ್ಸಿನಲ್ಲೇ ವೈರಾಗ್ಯವನ್ನು ತಾಳಿ ಮನೆ ಬಿಟ್ಟು ಊರೂರು ಅಲೆಯುತ್ತಾ ಹೊರಟವನು. ಈತ ತ್ರಿಪದಿ ಅಥವಾ ವಚನಗಳ ಮೂಲಕ ಕಂಡದ್ದನ್ನು ಕಂಡಂತೆ ಮಾತನಾಡಿದ್ದಾನೆ. ಜನತೆಯಲ್ಲಿ ಸರಿಯೆಂದು ಕಂಡುಬಂದ ರೀತಿ–ನೀತಿಗಳ ಬಗೆಗೆ ಒಳ್ಳೆಯ ಮಾತುಗಳಾಡಿದ್ದಾನೆ. ಥಳಕು ಮಾತುಗಳು, ಬೂಟಾಟಿಕೆಯನ್ನು ಕಂಡಾಗ ನಿಷ್ಠುರತೆಯಿಂದ ತೆಗಳಿದ್ದಾನೆ. ಹುಟ್ಟುವಾಗಲೇ ಲೋಕಾನುಭವವನ್ನು ಮೈಗೂಡಿಸಿಕೊಂಡಾಗ ಸರ್ವಜ್ಞ ಯಾವುದೇ ಸಂಪ್ರದಾಯಗಳಿಗೆ ಜೋತು ಬಿದ್ದ ಕವಿಯಲ್ಲ. ಪಂಡಿತರು, ರಾಜರನ್ನು ಹೊಗಳಿ ಪದಕ, ಪ್ರಶಸ್ತಿ ಗಳಿಸಿಕೊಳ್ಳ:ಬೇಕೆಂಬ ಮೋಹವುಳ್ಳವನಲ್ಲ; ವ್ಯಕ್ತಿಯನ್ನು ನೋಡಿದ ಕೂಡಲೇ ಅವನ ವ್ಯಕ್ತಿತ್ವನ್ನು ಕುರಿತು ಸ್ಥಳದಲ್ಲೇ ವಚನವೊಂದನ್ನು ರಚಿಸಿ ಹೇಳಬಲ್ಲ ಸತ್ವಪೂರ್ಣ ಆಶುಕವಿ. ಸರ್ವಜ್ಞನಿಗೆ ಯಾರ ಭಯವೂ ಇಲ್ಲ, ಒಮ್ಮೊಮ್ಮೆ ಹೊಗಳುಭಟ್ಟನಂತೆ ಎಲ್ಲರನ್ನೂ ಮೆಚ್ಚುವಂತೆ ತೋರಿದರೆ, ಮತ್ತೊಮ್ಮೆ ಕುಹುಕಿಯಂತೆ ಯಾರನ್ನೂ ಬಿಡದೆ ಆಡಿಕೊಳ್ಳುತ್ತಾನೆ.

ಕನ್ನಡದ ಸೀಮಾಪುರುಷನಾದ ಸರ್ವಜ್ಞನನ್ನು ಕುರಿತು, ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳು, "ಸರ್ವಜ್ಞ ಕನ್ನಡಿಗರ ತಿರುವಳ್ಳುವರ್, ಕನ್ನಡಿಗರ ವೇಮನ. ಅವರಂತೆ ಅವನಿಗೂ ನೀತಿ ಸಾಹಿತ್ಯದಲ್ಲಿ ಉಚ್ಚ ಸ್ಥಾನವು ಸಲ್ಲುತ್ತದೆ."[1] ಎಂದು ಹೇಳಿದ್ದಾರೆ. ಸರ್ವಜ್ಞರ ಬಗ್ಗೆ ನುಡಿದ ಈ ಮಾತುಗಳು ಸಮಂಜಸವಾಗಿವೆ. ಸರ್ವಜ್ಞನ ವಚನಗಳನ್ನು ಅನೇಕರು ಸಂಪಾದಿಸಿ ಪ್ರಕಟಿಸಿದ್ದಾರೆ. ಅವುಗಳಲ್ಲಿ ರೆವರೆಂಟ್ ಚೆನ್ನಪ್ಪ ಉತ್ತಂಗಿಯವರು ಸಂಪಾದಿಸಿ ಪ್ರಕಟಿಸಿದ ಸರ್ವಜ್ಞನ ತ್ರಿಪದಿಗಳ ಕೃತಿ ಅಚ್ಚುಕಟ್ಟಾಗಿದೆ. ಆ ನಂತರ ಡಾ. ಎಲ್. ಬಸವರಾಜ ಅವರ

'ಪರಮಾರ್ಥ', ಪ್ರೊ. ಎಂ.ಮರಿಯಪ್ಪಭಟ್ಟ ಹಾಗೂ ಡಾ. ಹೆಚ್. ತಿಪ್ಪೇರುದ್ರಸ್ವಾಮಿಯವರ ಸರ್ವಜ್ಞನ ವಚನ ಸಂಗ್ರಹಗಳನ್ನು ಗಮನಿಸಬಹುದು.

ಸರ್ವಜ್ಞನ ತ್ರಿಪದಿಗಳಲ್ಲಿ ಕುಟುಂಬದ ಪರಿಕಲ್ಪನೆಯು ಸಂಪ್ರದಾಯ ಸಮಾಜಕ್ಕೆ ಪೂರಕವಾಗಿರುವಂತೆ ತೋರುತ್ತದೆ. ಸರ್ವಜ್ಞ ತಾಯಿತನಕ್ಕಿಂತ ಭಿನ್ನವಾಗಿ ಸತಿತನವನ್ನು ಕಟ್ಟುವ ಕೆಲಸ ಮಾಡುತ್ತಾನೆ.

**"ಬೆಚ್ಚನೆಯ ಮನೆಯಿರಲು, ವೆಚ್ಚಕ್ಕೆ ಹೊನ್ನಿರಲು**
**ಇಚ್ಚೆಯನರಿವ ಸತಿಯಿರಲು ಸ್ವರ್ಗಕ್ಕೆ**
**ಕಿಚ್ಚು ಹಚ್ಚೆಂದ ಸರ್ವಜ್ಞ"**

ಇಲ್ಲಿ ಸ್ವರ್ಗವೆಂದರೆ ಲೌಕಿಕದ ಅಪರಿಮಿತ ಸುಖ ಸಂತೋಷ ಕುಟುಂಬವು ಧರ್ಮ, ಅರ್ಥ, ಕಾಮಗಳನ್ನು ಅಡಕಗೊಳಿಸುವ ಒಂದು ಸಾಮಾಜಿಕ ರಚನೆ. ಆದ್ದರಿಂದ, 'ಸೂಳೆಯಿಂ ಸಂಸಾರ ಕೆಡುಗುಂ' ಎಂಬುದು ಒಂದು ಸೂಕ್ಷ್ಮ ನೆಲೆಯಾದರೆ, ' ನಡತೆಗೆಟ್ಟ ಸತಿಯಿಂದ ಕೂಡಾ ಸಂಸಾರ ಕೆಡುತ್ತದೆ. ಎಂಬುದು

- **ಸರ್ವಜ್ಞನ ವಚನಗಳು – ಆರ್. ಗಣೇಶ್**

ಮತ್ತೊಂದು ಸೂಕ್ಷ್ಮ ನೆಲೆ. ಕುಟುಂಬದ ನೈತಿಕ ಮತ್ತು ಅನೈತಿಕತೆಗಳನ್ನು ಸರ್ವಜ್ಞ ತೀವ್ರವಾಗಿ ವಿಡಂಬಿಸುತ್ತಾನೆ.

ಕುಟುಂಬದಲ್ಲಿ 'ಹೆಂಡಿಂಗೆ ಹಿರಿತನವು ನಾಡೆಲ್ಲ ಕೆಡುಗು', 'ಹೆಂಡಿರ ಕೈತವ ಗಂಡರು ಬಲ್ಲರೆ', 'ಸೋರುವ ಮನೆಗಿಂತ ದಾರಿಯ ಮರ ಲೇಸು', 'ಹೋರುವ ಸತಿಯ ಬದುಕಿಂದ ಹೊಡೊದೊಯ್ವ ಮಾರಿ ಲೇಸು' ಎಂದು ಹೇಳುವಲ್ಲಿ ವಿವಾಹಿತರ ಬೇಡಿಕೆಗಳು ಈಡೇರದಿದ್ದರೆ ಕುಟುಂಬ ವ್ಯವಸ್ಥೆಯೇ ಅರ್ಥಹೀನ ಎಂಬ ಧ್ವನಿ ಇದೆ.

**"ಮನ ಬಂದ ಹೆಣ್ಣನ್ನು ವಿನಯದಲಿ ಕರೆದಿತ್ತು**
**ಮನಮುಟ್ಟಿ ಬಾಳ್ವೆ ಮಾಡಿದರೆ ಅಮೃತವ**
**ಕೆನೆಯ ಸವಿದಂತೆ ಸರ್ವಜ್ಞ"**

**"ಮಗಳಕ್ಕ ತಂಗಿಯು ಮಿಗೆ ಸೊಸೆಯು ನಾದಿನಿಯು**
**ಜಗದ ವನಿತೆಯರು ಜನನಿಯು ಇವರೊಳಗೆ**
**ಜಗಕ್ಕೊಬ್ಬಳೈಸೆ ಸರ್ವಜ್ಞ"**

ಸರ್ವಜ್ಞನು ನಿರೂಪಿಸುವ ವ್ಯಕ್ತಿಗೆ ಕೌಟುಂಬಿಕ ಪ್ರತಿನಿಧೀಕರಣವು ವ್ಯಕ್ತಿಗಳ (ಸತಿ–ಪತಿ–ಸುತ) ವರ್ತನೆ ಮತ್ತು ಸಮಸ್ಯೆಗಳ ವಿನ್ಯಾಸ ಸ್ತರದಲ್ಲಿ ಇರುವಂತಹದ್ದು."2 ಉದಾಹರಣೆಗೆ 'ಮಕ್ಕಳಿಲ್ಲದ ಮನೆಯು ಪಕ್ಷಿಯಿಲ್ಲದ ವನವು ದಿಕ್ಕಿಲ್ಲದವನ ಸಂಸಾರ



ಕಳ್ಳನು ಮನೆ ಹೊಕ್ಕು ಹೋದಂತೆ'. 'ಮಗಳ ಮಕ್ಕಳು ಹೊಲ್ಲ' ಹೀಗೆ ಬೇರೆ ಬೇರೆ ರೂಪಕಗಳಲ್ಲಿ ಪುನರಾವರ್ತಿತ ಆಶಯಗಳು ಪುರುಷ ನಿಷ್ಠ ಕುಟುಂಬದ ನಿರೀಕ್ಷಣಾ ವಿನ್ಯಾಸಗಳಾಗಿವೆ. ಸಂಸಾರವು ಕೆಟ್ಟ ಅಥವಾ ಒಡೆದ ಸಂದರ್ಭಗಳಲ್ಲಿ, ಕುಟುಂಬದಲ್ಲಿ ಸ್ತ್ರೀಯು ಕೌಟುಂಬಿಕವಾಗಿ ಅಪರಾಧಿಯಂತೆ, ದ್ರೋಹಿಯಂತೆ ಬಿಂಬಿತಳಾಗಿದ್ದಾಳೆ, ಆಕೆಯನ್ನು ಋಣಾತ್ಮಕವಾಗಿ 'ಹಂದೆ', 'ನಾಯಿ' ಇತ್ಯಾದಿಯಾಗಿ ಬಿಂಬಿಸಲಾಗಿದೆ.

**"ಉಲಿಯದೆ ಕಲೆಯದೆ/ ತಲೆಯೆತ್ತಿ ನೋಡದೆ**
**ಬಲು ಬಲ್ಲುತನದಿ ಇರುವಳು– ದೊರೆವುದು**
**ಗುರುವಿನ ಕರುಣ ಸರ್ವಜ್ಞ"**

**"ರಾಳೆ ಒಲೆಯನಿಟ್ಟು/ ಬೇಳೆ ಮಣಿಯನು ಕಟ್ಟಿ**
**ವ್ಯಾಳ್ಯವ ನರಿತು ನಡೆವಳು– ದೊರೆಯನು**
**ಶೂಲಿಯ ಕರುಣ ಸರ್ವಜ್ಞ"**

ಕೌಟುಂಬಿಕ ಜೀವನದ ಒಳಗೆ ಹೆಣ್ಣು ದೊರೆಯುವುದು ಅಥವಾ ದೂರವಾಗುವುದು ಗಂಡಿನ ಅದೃಷ್ಟ ಮತ್ತು ವಿಧಿಯ ನಿರ್ವಚನ, ಕುಲಹೀನ ಹೆಣ್ಣು ತರಹೊಲ್ಲ, ಬ್ಯಾಸರಿಸಿ ಕೊಂಬ ಸತಿಹೊಲ್ಲ, ಮತ್ಸರಿಸಿ ಬರುವ ಸತಿ ಹೊಲ್ಲ , ಬಣ್ಣವನ್ನು ಬರೆವ ಸತಿ ಹೊಲ್ಲ, ಕಳ್ಳ ನಾರಿಯು ಹೊಲ್ಲ, ಹೋರುವ ಸತಿ ಹೊಲ್ಲ ಎಂದು ನಿರಾಕರಣೆಯ ಆಯಾಮವನ್ನು ತಿಳಿಸುತ್ತಾನೆ.

- ಕಥನ ರಾಜಕಾರಣ– ಡಾ. ಕವಿತಾ ರೈ

**"ಗಂಡಗಂಬಲಿಯಿಕ್ಕಿ। ಗಂಡು ಗರಣೆಯ ನುಂಗಿ**
**ಗಂಡ ಬಂದಾಗ ನರಳುವ ಕಳ್ಳಿಗೆ**
**ಗುಂಡುಕಲ್ಲು ಮದ್ದು ಸರ್ವಜ್ಞ"**

**"ಉಲಿಯುವಳು ಕಲೆವಳು। ಮಲೆವಳು ಮನೆಯಲ್ಲಿ**
**ಕೊಲುವಳು ತನ್ನ ಪುರುಷನ– ಆ ಹೆಣ್ಣ**
**ಒಲೆಯಲ್ಲಿ ಹಾಕು ಸರ್ವಜ್ಞ"**

**"ಕೆಚ್ಚುವಳು ಕಲೆವಳು। ಮುಚ್ಚುಳಿದಲುಂಬುವಳು**
**ಹುಚ್ಚು ನಾಯಂತೆ ತಿರುಗುವ। ಹೆಣ್ಣನ್ನು**
**ಕಿಚ್ಚಿನಲಿ ಹಾಕು ಸರ್ವಜ್ಞ"**

ಸರ್ವಜ್ಞನ ಇಂಥ ಮಾತುಗಳು ಹೆಣ್ಣಿನ ಕುರಿತು –

ಭಾರತೀಯ ಸಾಂಪ್ರದಾಯಿಕ ಸಮಾಜದ ನಿಂದೆ, ಅಪಮಾನದ ಸ್ವರೂಪದವುಗಳಾಗಿವೆ. ಸ್ಮೃತಿ, ಧರ್ಮಶಾಸ್ತ್ರ, ಕೌಟಿಲ್ಯನ ಅರ್ಥಶಾಸ್ತ್ರ, ಶುಕ್ರನೀತಿಸಾರ ಮುಂತಾದ ಗ್ರಂಥಗಳಲ್ಲಿ ಇರುವ ಸ್ತ್ರೀಯರಿಗೆ ಸಂಬಂಧಿಸಿದ ವಿಚಾರಗಳಿಗೂ

ಸರ್ವಜ್ಞನ ತ್ರಿಪದಿಗಳ ಆಶಯಕ್ಕೂ ಯಾವುದೇ ಭಿನ್ನತೆ ಇರುವಂತೆ ತೋರುವುದಿಲ್ಲ. ಹೆಣ್ಣಿಗೆ ತನ್ನದೇ ಆದ ಅಸ್ಥಿತ್ವ, ತನ್ನತನ ಇರುವಂತೆ ಚಿತ್ರಿಸಿಲ್ಲ. ಹೆಣ್ಣು ಗಂಡಿಗೆ ಹೊಂದಿಕೊಂಡು ಪರಾವಲಂಬಿಯಾಗಿ ಬದುಕಬೇಕು. ಇಲ್ಲವಾದರೆ ನಿರಾಕರಣೆಗೆ ಒಳಗಾಗಬೇಕು ಎನ್ನುವಂತೆ ಚಿತ್ರಿಸಿದ್ದಾನೆ.

ಸರ್ವಜ್ಞನು ತನ್ನ ತ್ರಿಪದಿಗಳಲ್ಲಿ, ಸಂಸಾರದ ಸತ್ಯಗಳನ್ನು ತೋರಿಸುವುದರ ಜೊತೆಗೆ ನಶ್ವರತೆಯನ್ನು ತೆರೆದಿಡಿತ್ತಾನೆ. ಕುಟುಂಬ ಜೀವನದ ಸ್ವಾರ್ಥತೆಯನ್ನು ನಿರಾಕರಿಸುತ್ತಾನೆ.

**"ಮಡದಿ ಮಕ್ಕಳ ಮಮತೆ ಒಡಲೊಡವೆಯಿರುವವನಕ**
**ಒಡಲೊಡವೆ ಕೆಡರದ ಮರುದಿನವೆ ಅವರೆಲ್ಲ**
**ಕಡೆಗೆ ಸಾರಿಹರು ಸರ್ವಜ್ಞ"**

**"ಹೆಂಡಿರು ಮಕ್ಕಳಿಗೆಂದು ದಂಡಿಸದಿರು ದೇಹವ**
**ಕಂಡ ವಸ್ತುವನು ಕೊಡದುಣವೆ ಬೈಚಿಡಲು**
**ಕಂಡವರಿಗಹುದು ಸರ್ವಜ್ಞ."**

ಪುರುಷ ಪ್ರಧಾನ ಸಮಾಜದಲ್ಲಿ ಮುಟ್ಟು, ಬಸಿರು, ಬಾಣಂತನ ಇವು ಪುರುಷನ ಕಾಮ ಜೀವನಕ್ಕೆ ಪೂರಕಗಳಲ್ಲವೆಂಬ ಕಾರಣಕ್ಕೆ ಹೇರಲಾಗಿರುವ ಸಾಮಾಜಿಕ ವಿಧಿ ನಿಷೇಧಗಳು. ಈ ಚೌಕಟ್ಟಿನಲ್ಲಿ ' ಮುಟ್ಟಾದ ಸ್ತ್ರೀ, ಬಸುರಿ, ಬಾಣಂತಿ ಹೊಲ್ಲ' ಎಂದು ಹೇಳಿದ್ದಾನೆ. ಸ್ತ್ರೀಯರನ್ನು ಮಾನಸಿಕವಾಗಿ, ದೈಹಿಕವಾಗಿ ದಮನಗೊಳಿಸುವ ಆಚರಣೆಗಳನ್ನು ವೈಧವ್ಯದ ಕುರಿತು ವ್ಯಕ್ತಪಡಿಸಿರುವ ತ್ರಿಪದಿಗಳಲ್ಲಿ ಗಮನಿಸಬಹುದು.

'ಮುಂಡೆಯ ಬಾಯಿ ಹೇತ ಕೊಂಡೆಯಂತಿರಬೇಕು', 'ಮುಂಡೆ ಬೈತಲೆಯ ತೆಗೆದಿಹರೆ ಮಿಂಡನ ಕೊಂಡಲೆಂದರಿಗು', ಮುಂಡೆಯು ಮಂಡೆ ನೂಲುಂಡೆಯಂತಿರಬೇಕು'. ಸರ್ವಜ್ಞನು ಇದ್ದ ಕಾಲಘಟ್ಟದಲ್ಲಿ ಹೆಣ್ಣಿನ ಸ್ಥಾನಮಾನಗಳು ಕೆಳಮಟ್ಟದಲ್ಲಿತ್ತೆಂಬುದು ತಿಳಿದುಬರುತ್ತದೆ.

**ಪರಾಮರ್ಶನ ಗ್ರಂಥಗಳು:**

- ಸರ್ವಜ್ಞನ ವಚನಗಳು– ಡಾ. ಆರ್. ಕೆ. ಗಣೇಶ, ದೇಸಿ ಪುಸ್ತಕ ವಿಜಯನಗರ ಬೆಂಗಳೂರು.
- ಸರ್ವಜ್ಞನ ತ್ರಿಪದಿಗಳು ಅನುಸಂದಾನದ ನೆಲೆಗಳು, ಅಮರೇಶ ನುಗಡೋಣಿ(ಸಂ): ಪ್ರಸಾರಂಗ ಕನ್ನಡ ವಿವಿ, ಹಂಪಿ.
- ಕಥನ ರಾಜಕಾರಣ–ಕವಿತಾ ರೈ, ದಶ ಪ್ರಕಾಶನ, ಬೆಂಗಳೂರು.

# ಸರ್ವಜ್ಞನ ತ್ರಿಪದಿಗಳಲ್ಲಿ ಗುರುವಿನ ಮಹತ್ವ

– ಶ್ರೀ ಶಂಭನಗೌಡ ನೀರಲಗಿ

ಸರ್ವಜ್ಞನ ಹೆಸರು ಕೇಳದ ಕನ್ನಡಿಗನಿಲ್ಲ. ಕನ್ನಡವನ್ನು ಓದಲು ಬರೆಯಲು ಬಾರದವರೂ ಕೂಡ ಸರ್ವಜ್ಞನ ಹೆಸರನ್ನೂ ಕೇಳಿರುತ್ತಾರೆ ಕನ್ನಡ ಕವಿಗಳಲ್ಲಿ ಸರ್ವಜ್ಞ ತೀರಾ ಅಪರೂಪದವನು. ಇವನು ಯಾವ ಮಹಾಕಾವ್ಯವನ್ನು ಬರೆದಿಲ್ಲ ಈತ ಅಲೆಮಾರಿ ತನ್ನ ಜೀವಿತದ ಅವಧಿಯಲ್ಲಿ ಹಲವು ವೈಚಿತ್ರವನ್ನು ಕಂಡವನು. ಆಯಾ ಕ್ಷಣಗಳಲ್ಲಿಯೇ ಮೂರು ಸಾಲಿನ ತ್ರಿಪದಿಯನ್ನು ಹಾಡಿ. ಜನರ ಮನಸ್ಸಿನಲ್ಲಿ ಅಚ್ಚೊತ್ತಿ ಉಳಿದುಕೊಂಡಿದ್ದಾನೆ.

**ಸರ್ವಜ್ಞನೆಂಬುವನು ಗರ್ವದಿಂದಾದವನೆ?**
**ಸರ್ವರೊಳೊಂದು ನುಡಿಗಲಿತು ವಿದ್ಯೆಯ**
**ಪರ್ವತವೇ ಆದ ಸರ್ವಜ್ಞ॥**

ಅವನಿಗೆ ಸಮಾಜವೇ ಒಂದು ದೊಡ್ಡ ವಿಶ್ವವಿದ್ಯಾನಿಲಯ ಈತ ಹಾವೇರಿ ಜಿಲ್ಲೆಯ ಹಿರೇಕೇರೂರು ತಾಲೂಕಿ ಅಬಲೂರು ಎಂಬಲ್ಲಿ ಜನಿಸಿದ ತ್ರಿಪದಿ ಬ್ರಹ್ಮನೆನಿಸಿಕೊಂಡು. ತನ್ನ ತನ್ನ ತ್ರಿಪದಿಗಳಲ್ಲಿ ಗುರು ಮತ್ತು ಗುರು ಶಿಷ್ಯರ ನಡುವಿನ ಸಂಬಂಧದ ಬಗ್ಗೆ 80 ಕ್ಕೂ ಹೆಚ್ಚು ತ್ರಿಪದಿಗಳನ್ನು ರಚಿಸಿದ ಮತ್ತು ಈತನ ಹೆಸರಲ್ಲಿ ಸುಮಾರು ಎರಡು ಸಾವಿರಕ್ಕೂ ಹೆಚ್ಚು ವಚನಗಳನ್ನು ಶ್ರೀ ಚನ್ನಪ್ಪ ಉತ್ತಂಗಿಯವರು ಸಂಪಾದಿಸಿರುವುದು ಅತ್ಯಂತ ಶ್ಲಾಘನೀಯವಾದ ಕೆಲಸ.

**"ಗುರುವಿಲ್ಲದಾ ಜೀವನ ಸೂತ್ರವಿಲ್ಲದ ಗಾಳಿಪಟ"** ಭಗವಂತನ ಕರುಣೆ ಗುರುಗಳ ಮೂಲಕ ಹರಿದು ಬರುತ್ತದೆ. ಗಾಳಿಪಟವು ಸೂತ್ರವಿಲ್ಲದೆ ಹೇಗೆ ಸರಿಯಾಗಿ ಹಾರಲಾರದೋ. ಹಾಗೆಯೇ ಗುರುವಿನ